ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 03 ಎಸ್‌ಟಬಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ28.02.2018

"ಜರೂರು"

ಇವರಿಂದ :-
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಬೆಂಗಳೂರು--560001.

ಇವರಿಗೆ:-

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, 8ನೇ ಮೈಲಿ, ಆರ್.ವಿ.ಕಾಲೇಜು ಅಂಚೆ, ಕೆಂಚನಹಳ್ಳಿ, ಮೈಸೂರು ರಸ್ತೆ, ಬೆಂಗಳೂರು-560 059.

1/3/18

ಮಾನ್ಯರೆ,

ವಿಷಯ:- ಸಕಾಲ ಸೇವೆಯನ್ನು ಆನ್‌ಲೈನ್ ಮೂಲಕ ಒದಗಿಸುವ ಬಗ್ಗೆ.

ಉಲ್ಲೇಖ:- ಅಮುಕಾ/155/ಆಕಾ/2018, ದಿನಾಂಕ:26.02.2018.

<<*****>>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಉಲ್ಲೇಖಿತ ಟಿಪ್ಪಣಿ ಮತ್ತು ನಮೂನೆಯನ್ನು ಹಾಗೂ ಸಭಾ ಸೂಚನೆ ಪತ್ರವನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಸದರಿ ಟಿಪ್ಪಣಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ, ಸಕಾಲ ಸೇವೆಗಳನ್ನು ಆನ್‌ಲೈನ್‌ನಲ್ಲಿ ನೀಡಿರುವ ಬಗ್ಗೆ ಪರಿಶೀಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:**07.3.2018**ರಂದು ಸಭೆಯನ್ನು ಆಯೋಜಿಸಲಾಗಿದ್ದು, ಸದರಿ ಸಭೆಗೆ ಪೂರಕ ಮಾಹಿತಿಯನ್ನು ಒದಗಿಸಬೇಕಾಗಿರುವುದರಿಂದ ಟಿಪ್ಪಣಿಯಲ್ಲಿ ಕೋರಿರುವ 3 ಅಂಶಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಂಡು, ನಮೂನೆಯಲ್ಲಿ ವಿರಗಳನ್ನು ಭರ್ತಿ ಮಾಡಿ ಇಂದೇ ಸಾಫ್ಟ್ ಕಾಪಿಯನ್ನು ಇ-ಮೇಲ್ ವಿಳಾಸಕ್ಕೆ (usgen.others@gmail.com) ತಪ್ಪದೇ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ. ತಪ್ಪಿದ್ದಲ್ಲಿ, ವಿಳಂಬಕ್ಕೆ ತಮ್ಮನ್ನೇ ನೇರಹೊಣೆಗಾರರನ್ನಾಗಿ ಮಾಡಲಾಗುವುದೆಂದು ತಿಳಿಸುತ್ತಾ, ಪೂರ್ಣವಿವರಗಳೊಂದಿಗೆ ಸಂಬಂಧಪಟ್ಟ ನೋಡಲ್ ಅಧಿಕಾರಿಗಳನ್ನು ಸಭೆಗೆ ನಿಯೋಜಿಸುವುದು.

ತಮ್ಮ ನಂಬುಗೆಯ

28/2/18

(ಅನಂತಪದ್ಮನಾಭ ಹೆಚ್.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ (ಸಾಮಾನ್ಯ)

ಅಪರ ಮುಖ್ಯ ಕಾರ್ಯದರ್ಶಿಗಳ ಕಛೇರಿ

**OFFICE OF THE ADDITIONAL CHIEF SECRETARY**

ವಿಧಾನ ಸೌಧ
ಬೆಂಗಳೂರು

ಸಂಖ್ಯೆ: ಅಮುಕಾ/155/ಆಕಾ/2018 ದಿನಾಂಕ: 26-2-2018

## ಟಿಪ್ಪಣಿ

1. ಸಕಾಲ ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸಲು ಮಾನ್ಯ ಮುಖ್ಯಮಂತ್ರಿಗಳ 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಈ ಕೆಳಕಂಡಂತೆ ತಿಳಿಸಿರುವಂತೆ ಆನ್‌ಲೈನ್ ಮೂಲಕ ಒದಗಿಸಲು ಕ್ರಮ ಜರುಗಿಸುವುದು.

"293. ಬಿಬಿಎಂಪಿ ಸೇರಿದಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ನಾಗರೀಕರಿಗೆ ಆಸ್ತಿ ತೆರಿಗೆ ವಹಿ ನಕಲು (ಖಾತಾ), ಕಟ್ಟಡ ನಕ್ಷೆ ಅನುಮೋದನೆ, ನೀರು ಮತ್ತು ವಿದ್ಯುತ್ ಸಂಪರ್ಕ, ರಸ್ತೆ ತುಂಡರಿಸಲು ಅನುಮತಿ ಇತ್ಯಾದಿ ನಾಗರೀಕ ಸೇವೆಗಳನ್ನು ಸುಲಭವಾಗಿ ಒದಗಿಸಲು ಸ್ವಯಂ ಚಾಲಿತ ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ, ಇದರ ಬಳಕೆಯನ್ನು ಕಡ್ಡಾಯಗೊಳಿಸಲಾಗುವುದು.

380. 2018-19 ಸಾಲಿನಲ್ಲಿ, ನಮ್ಮ ಸರ್ಕಾರವು ಇ-ಸೈನ್, ಡಿಜಿ ಲಾಕರ್ ಇತ್ಯಾದಿ ಆಧುನಿಕ ಇ-ಆಡಳಿತ ಉಪಕರಣಗಳನ್ನು ಬಳಸಿ ಸಕಾಲ 2.0ಗೆ ಉನ್ನತೀಕರಿಸಿ ಸೇವೆಗಳನ್ನು ಮುಖ ರಹಿತ (Faceless) ನಗದುರಹಿತ (Cashless) ಮತ್ತು ಕಾಗದರಹಿತ (Paperless)ವಾಗಿ ಮಾಡಲಾಗುವುದು. ಈ ಉಪಕರಣಗಳನ್ನು ಬಳಸಿ ಯಾವುದೇ ನಾಗರೀಕ ಸೇವಾ ಕೇಂದ್ರಗಳಲ್ಲಿ ಸೇವೆಗಳಿಗೆ ನಾಗರೀಕರು ಅರ್ಜಿ ಸಲ್ಲಿಸಬಹುದಾಗಿದೆ."

2. ನಿಮ್ಮ ಇಲಾಖೆಗೆ ಸಂಬಂಧಿಸಿದ ಸಕಾಲ ಸೇವೆಗಳು (ಪಟ್ಟಿ ಲಗತ್ತಿಸಿದೆ). ಆನ್‌ಲೈನ್ ನಲ್ಲಿ ಲಭ್ಯವಿದ್ದಲ್ಲಿ, ಅದನ್ನು ಸಕಾಲ ತಂತ್ರಾಂಶದೊಂದಿಗೆ ಜೋಡಿಸಲು ಕ್ರಮ ಜರುಗಿಸುವುದು. ಈ ಬಗ್ಗೆ ಲಗತ್ತಿಸಿದ ನಮೂನೆಯಲ್ಲಿ ಮಾಹಿತಿಯನ್ನು ಕಳುಹಿಸುವುದು.

3. ಒಂದು ವೇಳೆ ತಂತ್ರಾಂಶ ಲಭ್ಯವಿಲ್ಲದಿದ್ದಲ್ಲಿ, ಇ-ಆಡಳಿತ, NIC ಇವರ ಸಹಯೋಗದೊಂದಿಗೆ ಸದರಿ ಸೇವೆಯನ್ನು ಅನ್‌ಲೈನ್ ಮೂಲಕ ಒದಗಿಸಲು ಶೀಘ್ರವಾಗಿ ಅಭಿವೃದ್ಧಿಪಡಿಸಲು ಕ್ರಮ ಜರುಗಿಸಲು ಕೋರಿದೆ.